ಅಸಂಘಟಿತ ವಲಯದ ಕಾರ್ಮಿಕರು

83 (1949); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಎಷ್ಟು; (ವಿವರ ನೀಡುವುದು);

ಆ) ಈ ಕಾರ್ಮಿಕರ ಸಮೀಕ್ಷೆ ನಡೆಸಿದ್ದು ಯಾವಾಗ;

ಇ) ಕಳೆದ 2 ವರ್ಷಗಳಿಂದ ಸರ್ಕಾರ ಇವರ ಕಲ್ಯಾಣಕ್ಕಾಗಿ ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಅನುದಾನ ಎಷ್ಟು; ಈ ಅನುದಾನವನ್ನು ಯಾವ ಯಾವ ಯೋಜನೆಗಳಡಿ ವೆಚ್ಚ ಮಾಡಲಾಗಿದೆ; (ವಿವರ ನೀಡುವುದು)

ಈ) ಸದರಿ ಕಾರ್ಮಿಕರ ಭದ್ರತೆಗೆ ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; ಈ ಯೋಜನೆಗಳು ಎಂದಿನಿಂದ ಜಾರಿಗೆ ಬರಲಿವೆ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಅಸಂಘಟಿತ ವಲಯದಲ್ಲಿ 245.50 ಲಕ್ಷ ಅಸಂಘಟಿತ ಕಾರ್ಮಿಕರು ಇರುವುದಾಗಿ ಅಂದಾಜಿಸಲಾಗಿದೆ.

ಆ) ರಾಷ್ಟ್ರದಾದ್ಯಂತ ಇದುವರೆವಿಗೂ ಸಮೀಕ್ಷೆ ನಡೆಸಿರುವುದಿಲ್ಲ.

ಇ) ಇಲಾಖೆಯ ಅಧೀನದಲ್ಲಿರುವ ವಿವಿಧ ಮಂಡಳಿಗಳ ವತಿಯಿಂದ ಹಲವಾರು ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅವುಗಳಿಗೆ ಸರ್ಕಾರ ಕಳೆದ ಎರಡು ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನ ಮತ್ತು ವೆಚ್ಚದ ಯೋಜನಾವಾರು ವಿವರಗಳು ಈ ಮುಂದಿನಂತಿವೆ –

ಕ್ರ ಸಂ	ಯೋಜನೆಗಳು	2013–14		2014–15	
		ಅನುದಾನ (₹ ಲಕ್ಷಗಳಲ್ಲಿ)	ವೆಚ್ಚ (₹ಲಕ್ಷಗಳಲ್ಲಿ)	ಅನುದಾನ (₹ ಲಕ್ಷಗಳಲ್ಲಿ)	ವೆಚ್ಚ (₹ ಲಕ್ಷಗಳಲ್ಲಿ)
1	ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ				
(ಅ)	ಎನ್.ಪಿ.ಎಸ್ ಲೈಟ್– ಸ್ವಾವಲಂಭನ್ ಯೋಜನೆ	337.5	27.98	525	189.35
(ಆ)	ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ	329	355 * (ಹೆಚ್ಚುವರಿ ಹಣವನ್ನು 2012–13ನೇ ಸಾಲಿನ ಅನುದಾನದಲ್ಲಿ ಭರಿಸಲಾಗಿದೆ)	525	344
2	ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ ಸೊಸೈಟಿ				
	ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ	300	–	3664	–
3	ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ 8 ರೀತಿಯ ಕಲ್ಯಾಣ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ.				

2013–14 ಮತ್ತು 2014–15ನೇ ಸಾಲುಗಳಲ್ಲಿ ವಿತರಿಸಲಾದ ಧನಸಹಾಯ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಸೌಲಭ್ಯದ ವಿವರ	ಫಲಾನುಭವಿಗಳ ಸಂಖ್ಯೆ	ಮೊತ್ತ
1	ಶೈಕ್ಷಣಿಕ ಧನಸಹಾಯ	27,773	10,21,34,670
2	ಮದುವೆ ನೆರವು	1936	8,52,75,000
3	ಅಂತ್ಯಸಂಸ್ಕಾರ ವೆಚ್ಚ	1346	5,77,21,000
4	ವೈದ್ಯಕೀಯ ನೆರವು	157	1,55,206
5	ಹೆರಿಗೆ ಧನಸಹಾಯ	317	43,45,500
6	ಪ್ರಮುಖ ವೈದ್ಯಕೀಯ ವೆಚ್ಚ	364	98,15,167
7	ಅಪಘಾತದಿಂದ ಮರಣ/ ಶಾಶ್ವತ ದುರ್ಬಲತೆ ಪರಿಹಾರ	44	53,52,248
8	ಉಪಕರಣ	11	55,000
ಒಟ್ಟು		**31,948**	**26,48,53,791**

ಈ) ಇಲಾಖೆಯು ತನ್ನ ಅಧೀನದಲ್ಲಿರುವ ಮಂಡಳಿಗಳ ಮೂಲಕ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು ಅದರ ವಿವರಗಳು ಈ ಮುಂದಿನಂತಿವೆ.

1) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಹಾಗೂ ರಾಜ್ಯದ ನಿಯಮ 2006 ರಂತೆ ಈ ಮಂಡಳಿಯನ್ನು ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸ್ಥಾಪಿಸಿದ್ದು ಮಂಡಳಿಯಿಂದ 12 ಬಗೆಯ

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಲಾಗಿದೆ. ಅದರಲ್ಲಿ 8 ಯೋಜನೆಗಳು ಜಾರಿಯಲ್ಲಿ ಇರುತ್ತದೆ. ಅವುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ರಾಜ್ಯಸರ್ಕಾರವು ಈ ಮಂಡಳಿಯ ಮೂಲಕ ಈ ಕೆಳಗಿನ 2 ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಅದರ ವಿವರಗಳು ಈ ಮುಂದಿನಂತಿವೆ.

1. ಎನ್.ಪಿ.ಎಸ್ ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆ

- ಈ ಯೋಜನೆಯಡಿ ವಂತಿಕೆದಾರನು ಪಾವತಿಸುವ ವಂತಿಕೆಗೆ ಸಮಾನಾಂತರವಾಗಿ ವಾರ್ಷಿಕ ಗರಿಷ್ಠ ₹ 1200/– ಪ.ಜಾ/ಪ.ಪಂ ದ ವಂತಿಕೆದಾರರಿಗೆ ವಾರ್ಷಿಕ ಗರಿಷ್ಠ ₹ 2400/– ರವರೆಗೆ **ರಾಜ್ಯ ಸರ್ಕಾರವು** ಪಾವತಿಸುತ್ತದೆ.
- ವಾರ್ಷಿಕ ಕನಿಷ್ಠ ₹ 1000/– ಪಾವತಿಸುವ ವಂತಿಕೆದಾರರಿಗೆ **ಕೇಂದ್ರ ಸರ್ಕಾರದ ಸ್ವಾವಲಂಭನ್** ಯೋಜನೆಯಿಂದ ಪ್ರತಿ ವರ್ಷ ಗರಿಷ್ಠ ₹ 1000/– ಪಾವತಿ.
- 60 ವರ್ಷ ಪೂರೈಸಿದ ನಂತರ ಮಾಸಿಕ ಪಿಂಚಣಿ ಸೌಲಭ್ಯ. ಈ ಯೋಜನೆಯಡಿ ನೋಂದಣಿಯನ್ನು ದಿನಾಂಕ: 1.4.2015 ರಿಂದ ಪಿ.ಎಫ್.ಆರ್.ಡಿ.ಎ ಸೂಚನೆಯನ್ವಯ ಸ್ಥಗಿತಗೊಳಿಸಲಾಗಿದೆ.

2. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ

ಈ ಯೋಜನೆಯಡಿ ಕರ್ನಾಟಕ ರಾಜ್ಯದ ವಾಣಿಜ್ಯ ವಾಹನ ಚಾಲನಾ ಪರವಾನಗಿ ಮತ್ತು ಬ್ಯಾಡ್ಜ್ ಹೊಂದಿರುವ ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಲಾರಿ ಮತ್ತು ಬಸ್ ಚಾಲಕರು ಕರ್ತವ್ಯದಲ್ಲಿರುವಾಗ ಅಥವಾ ಕರ್ತವ್ಯದಲ್ಲಿಲ್ಲದಿರುವಾಗ ಅಪಘಾತಕ್ಕೀಡಾಗಿ ಮರಣ ಹೊಂದಿದಲ್ಲಿ ₹ 2 ಲಕ್ಷ, ಶಾಶ್ವತ ದುರ್ಬಲತೆ ಹೊಂದಿದದಲ್ಲಿ ₹ 2 ಲಕ್ಷಗಳವರೆಗೆ ಪರಿಹಾರ ಅಥವಾ ತಾತ್ಕಾಲಿಕ ದುರ್ಬಲತೆ ಹೊಂದಿದಾಗ ಒಳರೋಗಿ ಚಿಕಿತ್ಸೆಗಾಗಿ ಗರಿಷ್ಠ ₹ 1 ಲಕ್ಷದವರೆಗೆ ಆಸ್ಪತ್ರೆ ವೆಚ್ಚ ಹಿಂಪಡೆಯುವ ಸೌಲಭ್ಯ.

3) ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ:

ಬಿಪಿಎಲ್ ಮತ್ತು ಹಲವು ನಿರ್ದಿಷ್ಟ ಕಾರ್ಮಿಕ ಕುಟುಂಬಗಳ ಆರೋಗ್ಯ ರಕ್ಷಣೆಗಾಗಿ ಈ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ಪಡೆದ ಪ್ರತಿ ಕುಟುಂಬದ ಗರಿಷ್ಠ 5 ಜನ ಸದಸ್ಯರು ವಾರ್ಷಿಕ ₹ 30,000/– ವರೆಗಿನ ಚಿಕಿತ್ಸೆಯನ್ನು ನೋಂದಾಯಿತ ಆಸ್ಪತ್ರೆಗಳಲ್ಲಿ ಉಚಿತವಾಗಿ ಪಡೆಯಬಹುದಾಗಿರುತ್ತದೆ.

ಪಿ.ಎಫ್.ಆರ್.ಡಿ.ಎ ಸೂಚನೆಯನ್ವಯ ದಿನಾಂಕ: 01.04.2015 ರಿಂದ ಎನ್.ಪಿ.ಎಸ್. ಲೈಟ್ ಸ್ವಾವಲಂಬನ್ ಯೋಜನೆಯಡಿ ಹೊಸ ನೋಂದಣಿಯನ್ನು ಸ್ಥಗಿತಗೊಳಿಸಿರುವುದರಿಂದ, ಈ ಯೋಜನೆಯನ್ನು ಹೊರತುಪಡಿಸಿ ಮೇಲೆ ಹೇಳಲಾದ ಎಲ್ಲಾ ಯೋಜನೆಗಳು ಈಗಾಗಲೇ ಜಾರಿಯಲ್ಲಿರುತ್ತವೆ.

4) ರಾಜ್ಯದ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಗುರುತಿನ ಚೀಟಿ (UWIN cards) ಗುರುತಿನ ಚೀಟಿ ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯನ್ನು 2015–16ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ detail ಆಗಿ ಉತ್ತರವನ್ನು ಕೊಟ್ಟಿದ್ದಾರೆ ಆದರೂ ಕೂಡ ಅನೇಕ confusion ಇದೆ. ಕರ್ನಾಟಕದಲ್ಲಿ 245.50 ಲಕ್ಷ ಜನ ಅಸಂಘಟಿತ ಕಾರ್ಮಿಕರು ಇದ್ದಾರೆಂದು ಒಂದು ಕಡೆಯಲ್ಲಿ ಹೇಳಿದ್ದಾರೆ. ಆದರೆ ಮತ್ತೊಂದು ಕಡೆಯಲ್ಲಿ ಸರ್ವೆ ಮಾಡಿಲ್ಲವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರವು ಸರ್ವೆ ಮಾಡಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ರಾಷ್ಟ್ರದಾದ್ಯಂತ ಇದುವರೆಗೂ ಸಮೀಕ್ಷೆ ನಡೆಸಿರುವುದಿಲ್ಲವೆಂದು ಹೇಳಿದ್ದಾರೆ. ರಾಜ್ಯಸರ್ಕಾರದಿಂದ ಹಿಂದುಳಿದ ವರ್ಗಗಳ ಬಗ್ಗೆ OBC survey ನಡೆಯುತ್ತಿದೆ. ಅಸಂಘಟಿತ ಕಾರ್ಮಿಕರ ಬಗ್ಗೆ ತಮ್ಮ ಇಲಾಖೆಯಿಂದ ಸರ್ವೆ ಮಾಡಿ ಎಷ್ಟು ಜನರು ಇದ್ದಾರೆಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಿದೆಯಾ? ಇನ್ನು ಎರಡನೆಯದಾಗಿ ಇವರೆಲ್ಲರಿಗೂ ಬಿಪಿಎಲ್ ಕಾರ್ಡು ಸಿಕ್ಕಿರುವುದಿಲ್ಲ. ಬಹಳಷ್ಟು ಜನರು ಅಲೆಮಾರಿಗಳಾಗಿದ್ದಾರೆ. ಒಂದು ಕೆಲಸದಿಂದ ಮತ್ತೊಂದು ಕೆಲಸಕ್ಕೆ tent change ಮಾಡುತ್ತಲೇ ಇರುತ್ತಾರೆ. ಅವರುಗಳಿಗೆ ಕಾರ್ಡು ದೊರೆಯದೆ ಇದ್ದರೆ ಅವರಿಗೆ ತಿನ್ನುವುದಕ್ಕೆ ಅನ್ನಭಾಗ್ಯವು ಸಹಾ ಸಿಗುವುದಿಲ್ಲ. ಇರುವುದಕ್ಕೆ ಮನೆಯೂ ಸಹ ಸಿಕ್ಕುವುದಿಲ್ಲ.

ಅಧ್ಯಕ್ಷರು:– ಕಾರ್ಡನ್ನು ಬೇಗ ಕೊಡಿ ಎಂದು ತಾವು ಕೇಳಿ.

ಶ್ರೀ ಅರವಿಂದ ಲಿಂಬಾವಳಿ:– ಕಾರ್ಡ್ ಅನ್ನು ಕೊಡುವುದಕ್ಕೆ ಸಾಧ್ಯವೆ? ಮಾನ್ಯ ಮಂತ್ರಿಗಳೆ ಒಂದು ಸಮಾವೇಶದಲ್ಲಿ ಹೇಳಿದ್ದಾರೆ. ಕಾರ್ಮಿಕರು ಅವರು ಎಲ್ಲಿ ಕೆಲಸ ಮಾಡುತ್ತಾರೋ ಅವರಿಗೆ ಕನಿಷ್ಠ 10,000 ಸಂಬಳ ಬರುವ ಹಾಗೆ ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನು ಮಾಡುವುದಕ್ಕೆ ಸಾಧ್ಯವಿದೆಯಾ? Skill Development Corporation ಇವರಿಗೆ training ಕೊಡುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು:– ಮಾನ್ಯ ಲಿಂಬಾವಳಿಯವರೆ, ನೀವೇ ಎರಡನ್ನು ಕೇಳುತ್ತಿದ್ದೀರಲ್ಲಾ. ಪ್ರಶ್ನೆಯನ್ನು ಮತ್ತು ಉತ್ತರವನ್ನು ನೀವೇ ಕೇಳುತ್ತಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ:– Skill Development ನಿಂದ ಏನಾದರೂ training ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತಿದ್ದೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್:– ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಾಗಿರುವಂತಹ ಅರವಿಂದ ಲಿಂಬಾವಳಿಯವರಿಗೆ ಬಹಳ ಸ್ಪಷ್ಟವಾದಂತಹ ಮಾಹಿತಿಯನ್ನು ಕೊಟ್ಟಿದ್ದೇನೆ. ಇದರಲ್ಲಿ confusion ಆಗುವಂತಹದ್ದು ಏನು ಇಲ್ಲ. ದೇಶಾದ್ಯಂತ ಎಲ್ಲಿಯೂ ಕೂಡ ಸಮೀಕ್ಷೆ ಆಗದೆ ಇರುವಂತಹದ್ದು ನಿಜ. ನಾನು ತಮಗೆ ಅಂದಾಜು ಮಾಹಿತಿಯನ್ನು ಒದಗಿಸಿದ್ದೇನೆ. 2008 ರಲ್ಲಿ ಕಾನೂನು ಜಾರಿಗೆ ಬಂದ ಮೇಲೆ ...

ಅಧ್ಯಕ್ಷರು:– ಮಾನ್ಯ ಸಚಿವರೆ, ಈಗ ತಮಗೆ ಅಂದಾಜನ್ನು ಕೊಟ್ಟಿದ್ದೇವೆ. ಮುಂದೆ ವಿಸ್ತೃತವಾಗಿ ಅಂದಾಜು ಮಾಡುತ್ತೇವೆಂದು ಹೇಳಿ. ಈ ಬಗ್ಗೆ ಸರ್ವೆ ಮಾಡುತ್ತೇವೆಂದು ಅವರಿಗೆ ಹೇಳಿ. ಕಾರ್ಡ್ ಕೊಡುವ ವಿಚಾರವನ್ನು ಸಹ ಹೇಳಿ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್:– ಮಾನ್ಯ ಅಧ್ಯಕ್ಷರೆ, ಮಾಡುತ್ತೇವೆ. 2009 ರಲ್ಲಿ ಈ ಕಾನೂನು ಜಾರಿಗೆ ಬಂದಿದೆ. ಅವರಿಗೆ ಬಿಪಿಎಲ್ ಕಾರ್ಡ್ ಸಿಕ್ಕಿಲ್ಲ, ಅವರು ಅಲೆಮಾರಿಗಳಾಗಿದ್ದಾರೆನ್ನುವಂತಹ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಆ ಬಗ್ಗೆ ಪರಿಶೀಲನೆ ಮಾಡಿ ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು:– ಇದು ಪರಿಶೀಲನೆ ಅಲ್ಲ, ಕಾರ್ಡ್ ಸಿಗದೆ ಇದ್ದವರಿಗೆ ಕೊಡಿಸುತ್ತೇವೆಂದು ಹೇಳಿ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್:– ಈ ಮಾತನ್ನು ಅವರೇ ಹೇಳಿದ್ದಾರೆ. ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಕೆಲಸ ಮಾಡುವಂತಹವರು ಕಟ್ಟಡ ಕಾರ್ಮಿಕರು ಈ ವ್ಯಾಪ್ತಿಯಲ್ಲಿ ಬರುವುದರಿಂದ ಅವರಿಗೆ ಬಹುತೇಕವಾಗಿ ಈಗಾಗಲೇ ಕಾರ್ಡುಗಳು ತಲುಪಿವೆ ಎಂಬ ಬಗ್ಗೆ ನನ್ನ ಅಂಕಿಸಂಖ್ಯೆ ಇದೆ. ಅದೇನಾದರೂ ಆಗದಿದ್ದರೆ ಮತ್ತೊಮ್ಮೆ ನಾನು ಅದನ್ನು examine ಮಾಡುತ್ತೇನೆ.